ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
ಸಿ.ಸಿ. ನಂ ಃ**39/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀಮತಿ ಜ್ಯೋತಿ ಎನ್ ಎ | ಸಿ.ಡಬ್ಲ್ಯೂ - 13 |
| ಗಂಡನ ಹೆಸರು | ಃ ಅಶೋಕ್ | ಪಿ.ಡಬ್ಲ್ಯೂ -07 |
| ವಯಸ್ಸು | ಃ 50 ವರ್ಷ | |
| ಉದ್ಯೋಗ | ಃ ಪಿ ಎಸ್ ಐ, ಎನ್ ಆರ್ ಪುರ ಪೊಲೀಸ್ ಠಾಣೆ | |
| ವಾಸಸ್ಥಳ | ಃ ಎನ್ ಆರ್ ಪುರ. | |

ದಿನಾಂಕಃ **28.04.2026** ರಂದು ಪ್ರಮಾಣವಚನ ಬೋಧಿಸಲಾಯಿತು.
ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ನಾನು 2023 ರಿಂದ ಇಲ್ಲಿಯವರೆಗೆ ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

1.ದಿಃ 01.06.2025 ರಂದು ಮಧ್ಯಾಹ್ನ 1.20 ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ವರದಿ ಆರೋಪಿತರು, ಸ್ವತ್ತು ಹಾಗೂ ವಾಹನವನ್ನು ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನಾ ಸಂಖ್ಯೆ 46/2025 ರಲ್ಲಿ ದಾಖಲಿಸಿಕೊಂಡು ಪ್ರ.ವ.ವ. ಅನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ನಿವೇದಿಸಿಕೊಂಡಿರುತ್ತೇನೆ. ಅಮಾನತ್ತು ಪಡಿಸಿಕೊಂಡ ವಾಹನ ಮತ್ತು ಒಂದು ಹಸು ಮತ್ತು 5 ಕರುಗಳನ್ನು ಠಾಣಾ ಸ್ವತ್ತು ಪಟ್ಟಿಯಲ್ಲಿ ನಿವೇದಿಸಿಕೊಂಡಿರುತ್ತೇನೆ. ನಂತರ ನ್ಯಾಯಾಲಯದ ಅನುಮತಿ ಪಡೆದ ಸದರಿ ಜಾನುವಾರುಗಳನ್ನು ಪರೀಕ್ಷೆ ಮಾಡಲು ಪಶು ವೈದ್ಯಾಧಿಕಾರಿ ಎನ್ ಆರ್ ಪುರ ಇವರಿಗೆ ವರದಿಯನ್ನು ನಿವೇದಿಸಿಕೊಂಡಿರುತ್ತೇನೆ. ನಂತರ ಸದರಿ ಜಾನುವಾರುಗಳನ್ನು ಗೋಶಾಲೆ, ಬಸ್ತಿಮಠಕ್ಕೆ ಬಿಡಲು ಅನುಮತಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತರ ಸ್ವ-ಇಚ್ಛೆ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಒಂದನೇ ಆರೋಪಿ ಹಸುಗಳನ್ನು ತುಂಬಿದ ಸ್ಥಳ ತೋರಿಸುತ್ತೇನೆ ಎಂದು ಹೇಳಿದ ಮೇರೆಗೆ ದ್ಯಾವಣ ಗ್ರಾಮ 3 ನೇ ಆರೋಪಿಯ ಮನೆಯ ಮುಂದಿನ ಆವರಣದಲ್ಲಿ ಪಂಚರಾದ ನಂದನ್ ಮತ್ತು ದರ್ಶನ್ ಇವರ ಸಮಕ್ಷಮ ಪಂಚನಾಮೆಯನ್ನು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 4.00 ಗಂಟೆಯಿಂದ 6.00 ಗಂಟೆ ಅವಧಿಯಲ್ಲಿ ಮಾಡಿ ಆ ಕಾಲಕ್ಕೆ

ಭಾವಚಿತ್ರ ತೆಗೆದಿರುತ್ತೇನೆ. ನಂತರ ಹಸು ಮತ್ತು ವಾಹನವನ್ನು ವಿಲೇವಾರಿ ಮಾಡುವ ಸಂಬಂಧ ಉಪವಿಭಾಗಾಧಿಕಾರಿಗಳು, ತರೀಕೆರೆ ಇವರಿಗೆ ನಿವೇದನೆ ಮಾಡಿಕೊಂಡಿರುತ್ತೇನೆ.

**2.** ದಿ 02.06.2025 ರಂದು ಆರೋಪಿತರು ತನಿಖೆಗೆ ಅವಶ್ಯಕತೆ ಇಲ್ಲದಿರುವ ಕಾರಣ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಅದೇ ದಿನ ಚಾಸಾ 6 ರವರಿಂದ ದೃಢೀಕೃರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿ 02.06.2025 ರಂದು ವ್ಯವಸ್ಥಾಪಕರು, ಗೋಶಾಲೆ, ಬಸ್ರಿಮಠ ಇವರಿಗೆ ಜಾನುವಾರುಗಳನ್ನು ಪಡೆದು ಸ್ವೀಕೃತಿ ನೀಡುವಂತೆ ಮನವಿ ಮಾಡಿಕೊಂಡಿರುತ್ತೇನೆ. ಕೃತ್ಯ ಸ್ಥಳಕ್ಕೆ ಸಂಬಂಧಪಟ್ಟಂತೆ ದಾಖಲಾತಿ ನೀಡುವಂತೆ ಚಾಸಾ 12 ರವರಿಗೆ ನಿವೇದನೆ ಮಾಡಿಕೊಂಡಿರುತ್ತೇನೆ. ದಿನಾಂಕ11.06.2025 ರಂದು ಅವರಿಂದ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿ 3 ರವರು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡು ಬಂದಿದ್ದರಿಂದ ಅವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ, ಬಿಡುಗಡೆಗೊಳಿಸಿರುತ್ತೇನೆ. ದಿನಾಂಕ01.07.2025 ರಂದು ಚಾಸಾ 12 ರವರಿಂದ ಕೃತ್ಯ ಸ್ಥಳಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ12.08.2025 ಚಾಸಾ 10 ರವರಿಂದ ದಾಖಲಾತಿಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ14.08.2025 ರಂದು ಕೆ ಎ 66 /4542 ರ ಮಾಲೀಕರಾದ ಚಾಸಾ 11 ರವರಿಗೆ ಕೃತ್ಯ ನಡೆದ ದಿನ ವಾಹನವನ್ನು ಯಾರಿಗೆ ಕೊಟ್ಟಿರುತ್ತೀರಿ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸುವಂತೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ, ಅದೇ ದಿನ ಅವರಿಂದ ಉತ್ತರ ಪಡೆದು ಸದರಿ ದಾಖಲೆಯನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ01.06.2025 ರಂದು ಮಹಜರುದಾರರಾದ ಚಾಸಾ 2 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡ ಕಾರಣ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

3. ಸಾಕ್ಷಿಯು ತಾವು ದಿ 01.06.2025 ರಂದು ಸ್ವೀಕರಿಸಿದ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5(ಬಿ) ಎಂದು ಗುರುತಿಸಲಾಯಿತು. ದಿನಾಂಕ01.06.2025 ರಂದು ಕೃತ್ಯ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 8 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ನಿಪಿ 8 ನ್ನು ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ

ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 9 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ 6 ರವರಿಂದ ಸ್ವೀಕರಿಸಿದ ದೃಢೀಕರಣ ಪತ್ರ ನೋಡಿ ಗುರುತಿಸಿದ್ದು ನಿಪಿ 13 ಎಂದು, ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರುತಿಸಲಾಯಿತು. ದಿನಾಂಕ:01.06.2025 ರಂದು ಉಪ ವಿಭಾಗಾಧಿಕಾರಿಗಳಿಗೆ ಮಾಡಿಕೊಂಡ ನಿವೇದನೆಯ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ 14(ಎ) ಎಂದು ಗುರುತಿಸಲಾಯಿತು. ದಿನಾಂಕ:01.06.2025 ರಂದು ವ್ಯವಸ್ಥಾಪಕರು, ಬಸ್ತಿಮಠ ಗೋಶಾಲೆ ಇವರಿಂದ ಪಡೆದ ಸ್ವೀಕೃತಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಶು ವೈದ್ಯಾಧಿಕಾರಿಗಳಿಗೆ ನೀಡಿದ ಅರ್ಜಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಪಶು ವೈದ್ಯಾಧಿಕಾರಿಯಿಂದ ಸ್ವೀಕರಿಸಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 11 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ 11(ಬಿ) ಎಂದು ಗುರುತಿಸಲಾಯಿತು. ದಿನಾಂಕ:10.06.2025 ರಂದು ಪಿಡಿಒ ಆಡುವಳ್ಳಿ ಗ್ರಾಮ ಪಂಚಾಯಿತಿ ಇವರಿಗೆ ದಾಖಲಾತಿ ಕೋರಿ ಸಲ್ಲಿಸಿದ ಮನವಿಯ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 16 ಎಂದು, ಸಾಕ್ಷಿಯ ಸಹಿಯನ್ನು ನಿಪಿ16(ಎ) ಎಂದು ಗುರುತಿಸಲಾಯಿತು. ಪಿಡಿಒ ರವರಿಂದ ಸ್ವೀಕರಿಸಿದ ದಾಖಲಾತಿಯ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ17 ಎಂದು ಸಾಕ್ಷಿಯ ಸಹಿಯನ್ನು ನಿಪಿ17 (ಎ) ಎಂದು ಗುರುತಿಸಲಾಯಿತು. ದಿನಾಂಕ:16.06.2025 ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಕೊಪ್ಪ ಇವರಿಗೆ ದಾಖಲಾತಿ ನೀಡುವಂತೆ ಕೋರಿ ಸಲ್ಲಿಸಿದ ಅರ್ಜಿಯ ಪ್ರತಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ 18(ಎ) ಎಂದು ಗುರುತಿಸಲಾಯಿತು. ದಿ: 14.08.2025 ರಂದು ಚಾಸಾ 10 ರವರು ನೀಡಿದ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು. ದಿ: 14.08.2025 ರಂದು ಕಲಂ 133 ಮೋಟಾರು ವಾಹನ ಕಾಯಿದೆಯಡಿ ನೀಡಿದ ನೋಟೀಸ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ20(ಎ) ಎಂದು ಗುರುತಿಸಲಾಯಿತು.ಅ ದೇ ದಿನ ವಾಹನದ ಮಾಲೀಕರಿಂದ

ಸ್ವೀಕರಿಸಿದ ಪ್ರತ್ಯುತ್ತರ ನೋಟೀಸ್ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ21 ಎಂದು, ಸಾಕ್ಷಿಯ ಸಹಿಯನ್ನು ನಿಪಿ21(ಎ) ಎಂದು ಗುರುತಿಸಲಾಯಿತು. ದಿನಾಂಕಃ11.08.2025 ರಂದು ಉಪವಿಭಾಗಾಧಿಕಾರಿಗಳ ಆದೇಶದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 22 ಎಂದು ಸಾಕ್ಷಿಯ ಸಹಿಯನ್ನು ನಿಪಿ 22 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ 1 ಮತ್ತು 2 ರವರನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿ 3 ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಆರೋಪಿತರ ವಕೀಲರು ತಕರಾರು ಇಲ್ಲ ಎಂದು ಹೇಳಿರುತ್ತಾರೆ.

ಪಾಟೀ ಸವಾಲುಃ **1** ಮತ್ತು **2** ನೇ ಆರೋಪಿತರ ಪರ ಶ್ರೀ ಹೆಚ್ ಎ ಎಸ್ ವಕೀಲರಿಂದಃ

1. ನಾನು ದೋಷಾರೋಪಣ ಪಟ್ಟಿ ಸಲ್ಲಿಸುವ ಪೂರ್ವದಲ್ಲಿ ಈ ಪ್ರಕರಣದ ಸಾಕ್ಷಿದಾರರು ಮತ್ತು ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ನಾನು ದೋಷಾರೋಪಣ ಪಟ್ಟಿ ಸಲ್ಲಿಸುವ ಕಾಲಕ್ಕೆ ಪಂಚನಾಮೆ ಮಾಡಿದ ಸ್ಥಳದ ಸಾಕ್ಷಿದಾರರನ್ನು ಸಾಕ್ಷಿ ಪಟ್ಟಿಯಲ್ಲಿ ತೋರಿಸಿರುವುದಿಲ್ಲ. ಈ ರೀತಿ ಸಾಕ್ಷಿದಾರರು ಸೇರಿಸದೇ ಇರುವ ವಿಚಾರ ನನಗೆ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ ನಂತರ ಗೊತ್ತಾಗಿರುತ್ತದೆ. ನನಗೆ ಸದರಿ ವಿಚಾರ ಗೊತ್ತಾದ ನಂತರ ಹೆಚ್ಚುವರಿ ದೋಷಾರೋಪಣ ಪಟ್ಟಿ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ದಿನಾಂಕಃ01.06.2025 ರಂದು ಆ ದಿನ ನಾನೇ ಠಾಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಆ ದಿನ ಚಾಸಾ 1 ರವರು ದೂರನ್ನು ಮಧ್ಯಾಹ್ನ 1.20 ಗಂಟೆಗೆ ತಂದು ಕೊಟ್ಟಿರುತ್ತಾರೆ. ಚಾಸಾ 1 ರವರು ಬೆರಳಚ್ಚು ವರದಿಯನ್ನು ಠಾಣೆಯಲ್ಲಿ ತಯಾರಿಸುತ್ತಾರೆ. ಆ ದಿನ ಚಾಸಾ 1 ರವರು ದೂರಿನ ಜೊತೆ ವಾಹನ ಮತ್ತು ಜಾನುವಾರುಗಳನ್ನು ಠಾಣೆಗೆ ತಂದಿದ್ದರು. ನಾನು ವಾಹನದಲ್ಲಿದ್ದ ಜಾನುವಾರುಗಳನ್ನು ಕೆಳಗೆ ಇಳಿಸಿ ಪರಿಶೀಲನೆ ಮಾಡಿದ್ದೇನೆ. ನಾನು ಅದೇ ದಿನ ಜಾನುವಾರುಗಳನ್ನು ಹಿಂಸಾತ್ಮಕ ರೀತಿಯಲ್ಲಿ ತುಂಬಿದ್ದರು ಎಂಬ ಬಗ್ಗೆ ವೈದ್ಯರಿಂದ ಪರಿಶೀಲನೆ ಮಾಡಿಸಿರುತ್ತೇನೆ. ಆ ದಿನ ಜಾನುವಾರುಗಳನ್ನು ಇಳಿಸಿದ ನಂತರ ಡಾ.ಪ್ರೀತಂ ಎಂಬುವವರು ಠಾಣೆಯ ಹತ್ತಿರ ಬಂದು ಪರಿಶೀಲನೆ ಮಾಡಿರುತ್ತಾರೆ.

2. ಆ ದಿನ ಚಾಸಾ 9 ರವರು 5 ವರ್ಷದ ಒಂದು ಕಪ್ಪು ಬಣ್ಣದ ಹೋರಿಯ ಮುಂದಿನ ಬಲಗಾಲು ಮುರಿದಿರುವ ಬಗ್ಗೆ ಚಿಕಿತ್ಸೆ ಕೊಟ್ಟಿರುತ್ತಾರೆ. ಅದೇ ದಿನ ಡಾಕ್ಟರ್ ವರಿಂದ ಜಾನುವಾರಗಳನ್ನು ಪರೀಕ್ಷೆ ಮಾಡಿದ ಸಂಬಂಧ ನಾನು ವರದಿಯನ್ನು ಪಡೆದುಕೊಂಡಿರುವುದಿಲ್ಲ.

ಅದೇ ದಿನ ನಾವು ಜಾನುವಾರುಗಳ ಪರೀಕ್ಷಾ ವರದಿಯನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾವು ಅರ್ಜಿ ಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ತಾವು ಅರ್ಜಿ ಕೊಟ್ಟ ದಿನ ವೈದ್ಯರು ಪರೀಕ್ಷೆ ಮಾಡಿದ ಬಗ್ಗೆ ವರದಿಯನ್ನು ನಮಗೆ ಕೊಟ್ಟಿರುವುದಿಲ್ಲ. ನಾನು ಚಾಸಾ 9 ರವರಿಗೆ ನಿವೇದನೆ ಮಾಡಿಕೊಂಡ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಿಪಿ 10 ದಾಖಲೆಯನ್ನು ನಾನು ದಿನಾಂಕ:01.06.2025 ರಂದು ಜಾನುವಾರುಗಳನ್ನು ಪೊಲೀಸ್ ಠಾಣಾ ಆವರಣದಲ್ಲಿ ಪರೀಕ್ಷೆ ಮಾಡಿ ವರದಿ ನೀಡುವಂತೆ ಕೊಟ್ಟ ಮನವಿ ಇರುತ್ತದೆ. ನಾನು ಸದರಿ ಮನವಿಯನ್ನು ನಮ್ಮ ಸಿಬ್ಬಂದಿಯ ಮುಖಾಂತರ ಕಳುಹಿಸಿಕೊಟ್ಟಿರುತ್ತೇನೆ. ನಾನು ಪೊಲೀಸ್ ಠಾಣೆಯಲ್ಲಿ ಜಾನುವಾರುಗಳನ್ನು ಪರೀಕ್ಷೆ ಮಾಡಿ ವರದಿ ನೀಡುವಂತೆ ಕೊಟ್ಟ ನಿವೇದನೆಯನ್ನು ಹೊರುತುಪಡಿಸಿ ಬೇರೆ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ. ನನ್ನ ನಿವೇದನೆಯಂತೆ ಪೊಲೀಸ್ ಠಾಣಾ ಆವರಣದಲ್ಲಿ ಜಾನುವಾರುಗಳನ್ನು ಪರೀಕ್ಷೆ ಮಾಡಿರುವುದನ್ನು ಬಿಟ್ಟರೆ ಬೇರೆಲ್ಲೂ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಬಸ್ತಿ ಮಠದ ಗೋಶಾಲೆಯಲ್ಲಿ ಪರೀಕ್ಷೆ ಮಾಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಬಸ್ತಿಮಠದ ಗೋಶಾಲೆಯಲ್ಲಿ ಜಾನುವಾರುಗಳನ್ನು ಪರೀಕ್ಷೆ ಮಾಡುವಂತೆ ನಾನು ನಿವೇದನೆ ಮಾಡಿಕೊಂಡಿರುವುದಿಲ್ಲ.

3. ನಾವು ಕೊಟ್ಟ ನಿವೇದನೆ ಪಶು ವೈದ್ಯಾಧಿಕಾರಿಗೆ ಯಾವಾಗ ತಲುಪಿರುತ್ತದೆ ಎಂಬುದರ ಬಗ್ಗೆ ನಮ್ಮ ಬಳಿ ದಾಖಲಾತಿ ಇರುವುದಿಲ್ಲ. ನನ್ನ ತನಿಖೆಯ ಕಾಲಕ್ಕೆ ಪಶು ವೈದ್ಯಾಧಿಕಾರಿಗಳು ಯಾವಾಗ ಬಸ್ತಿಮಠಕ್ಕೆ ಹೋಗಿ ಜಾನುವಾರುಗಳನ್ನು ಪರೀಕ್ಷೆ ಮಾಡಿರುತ್ತಾರೆ ಎಂದು ನನಗೆ ಮರೆತುಹೋಗಿರುತ್ತದೆ. ನಾನು ಆರೋಪಿತರ ಸ್ವ-ಇಚ್ಛಾ ಹೇಳಿಕೆಗಳನ್ನು ಸ್ವತಂತ್ರ ಸಾಕ್ಷಿದಾರರ ಸಮಕ್ಷಮ ಪಡೆದುಕೊಂಡಿರುವುದಿಲ್ಲ. ನಮ್ಮ ಠಾಣೆಯಿಂದ ದ್ಯಾವಣ ಗ್ರಾಮ ಸುಮಾರು 35 ಕಿ.ಮೀ. ದೂರದಲ್ಲಿ ಇರುತ್ತದೆ. ನ.ರಾ.ಪುರದಿಂದ ಸದರಿ ದ್ಯಾವಣ ಗ್ರಾಮಕ್ಕೆ ನಮ್ಮ ಇಲಾಖಾ ಜೀಪಿನಲ್ಲಿ 25 ನಿಮಿಷಕ್ಕೆ ತಲುಪುತ್ತೇವೆ. ನಾವು ಪಂಚ ಸಾಕ್ಷಿದಾರರಿಗೆ ಸಹಕರಿಸುವಂತೆ 4.00 ಗಂಟೆಗೆ ನೋಟೀಸು ಕೊಟ್ಟಿರುತ್ತೇವೆ. ಆ ದಿನ ಪಂಚ ಸಾಕ್ಷಿದಾರರಿಗೆ ಠಾಣೆಯಲ್ಲಿಯೇ ನೋಟೀಸು ಕೊಟ್ಟು ನಮ್ಮ ಜೊತೆ ಇಲಾಖಾ ಜೀಪಿನಲ್ಲಿ ಆ ದಿನ ಕರೆದುಕೊಂಡು ಹೋಗಿರುತ್ತೇವೆ. ನಾವು ನೀಡಿದ ನೋಟೀಸಿನಲ್ಲಿ ಪಂಚರಿಗೆ ದ್ಯಾವಣ ಗ್ರಾಮದ ಮಂಜು ಅವರ ಮನೆಯ ಹತ್ತಿರ 4.00 ಗಂಟೆಗೆ ಬರುವಂತೆ ಹೇಳಿರುತ್ತೇವೆ ಎಂದರೆ ಸರಿ. ನಾವು ಸದರಿ ಸ್ಥಳಕ್ಕೆ ಹೋದಾಗಾ ಸಂಜೆ 4.30 ಸಮಯ ಆಗಿರಬಹುದು. ನಾವು ದ್ಯಾವಣ ಗ್ರಾಮದ ಬಳಿ ಆರೋಪಿ 3 ರವರ ಮನೆ ಎಲ್ಲಿ ಬರುತ್ತದೆ ಎಂಬ

ಬಗ್ಗೆ ಕೇಳಿದ್ದು, ಆದರೆ ಅವರು ಯಾರು ಎಂದು ಮರೆತು ಹೋಗಿರುತ್ತದೆ. 3 ನೇ ಆರೋಪಿಯ ಮನೆಯ ಅಕ್ಕ -ಪಕ್ಕ ಮನೆಗಳಿರುವುದಿಲ್ಲ, ತೋಟ ಇರುತ್ತದೆ. ನಾನು 3 ನೇ ಆರೋಪಿಯವರ ದನದ ಕೊಟ್ಟಿಗೆಯನ್ನು ಪರಿಶೀಲನೆ ಮಾಡಿರುವುದಿಲ್ಲ. ನಾವು ಸದರಿ ಮಹಜರನ್ನು 4.00 ಗಂಟೆಯಿಂದ 6.00 ಗಂಟೆಯ ಅವಧಿಯಲ್ಲಿ ಮಾಡಿರುತ್ತೇವೆ. ಸಾಕ್ಷಿ ಮುಂದುವರಿದು ಆರೋಪಿ ನಮ್ಮ ಜೊತೆ ಇದ್ದ ಕಾರಣ ಠಾಣೆಯನ್ನು ಬಿಡುವಾಗಲೇ ಮಹಜರನ್ನು ಮಾಡುತ್ತಾ ಹೋಗಿರುತ್ತೇವೆ ಎಂದು ನುಡಿದಿರುತ್ತಾರೆ. ನಿಪಿ 8 ರಲ್ಲಿ ಮಂಜು ಬಿನ್ ಸುರೇಶ ಇವರ ವಾಸದ ಮನೆಯ ಮುಂಭಾಗದಲ್ಲಿರುವ ರಸ್ತೆಯ ಹತ್ತಿರ ಮಹಜರು ಮಾಡಿದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿ. ಮಹಜರು ಮಾಡುವ ಕಾಲಕ್ಕೆ ಭಾವಚಿತ್ರನ್ನು ಚಾಸಾ 6 ರವರು ತೆಗೆದಿರುತ್ತಾರೆ. ನಾನು ಚಾಸಾ 6 ರವರ ಬಳಿ ಮಾತ್ರ ದೃಢೀಕರಣ ಪತ್ರ ಪಡೆದುಕೊಂಡಿರುತ್ತೇನೆ.

4. ನನ್ನ ತನಿಖೆಯ ಕಾಲಕ್ಕೆ ವಾಹನದ ಮಾಲೀಕರನ್ನು ವಿಚಾರಣೆ ಮಾಡಿ ಸಾಕ್ಷಿದಾರರನ್ನಾಗಿ ಮಾಡಿರುತ್ತೇನೆ. ನಾವು ಗೋಶಾಲೆಗೆ ಜಾನುವಾರುಗಳನ್ನು ಯಾವ ವಾಹನದಲ್ಲಿ ತೆಗೆದುಕೊಂಡು ಹೋಗಿರುತ್ತೇವೆ ಎಂಬುದರ ಬಗ್ಗೆ ನನಗೆ ನೆನಪಿರುವುದಿಲ್ಲ. ಮತ್ತು ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ದಿನಾಂಕಃ 01.06.2025 ರಂದು ಆರೋಪಿ 1 ಮತ್ತು 2 ರವರು ನನ್ನ ಮುಂದೆ ಯಾವುದೇ ಸ್ವ -ಇಚ್ಛಾ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ಆರೋಪಿ 3 ರವರ ಮನೆಯ ಹತ್ತಿರ ಹೋಗಿ ಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತನಿಖೆಯ ಕಾಲಕ್ಕೆ ದಾಖಲಾತಿಗಳನ್ನು ಸರಿಯಾಗಿ ಪರಿಶೀಲಿಸದೇ ಆರೋಪಿತರ ವಿರುದ್ದ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತನಿಖೆಯ ಕಾಲಕ್ಕೆ ಆರೋಪಿ 3 ರವರ ಅಕ್ಕ-ಪಕ್ಕದವರನ್ನು ವಿಚಾರಣೆ ಮಾಡಿದ್ದು ಅವರು ತನಿಖೆಗೆ ಸಹಕರಿಸಿರುವುದಿಲ್ಲ. ವ್ಯವಸ್ಥಾಪಕರು ಬಸ್ತಿಮಠ ಇವರಿಗೆ ನಾವು ನೀಡಿದ ನಿವೇದನೆಯನ್ನು ಅವರು ದಿನಾಂಕಃ01.06.2025 ರಂದು ಸ್ವೀಕರಿಸಿರುತ್ತಾರೆ. ನಾವು ಪಶು ವೈದ್ಯಾಧಿಕಾರಿಗಳಿಗೆ ನೀಡಿದ ನಿವೇದನೆಯನ್ನು ಅವರು ದಿನಾಂಕಃ03.06.2025 ರಂದು ಸ್ವೀಕರಿಸಿರುತ್ತಾರೆ ಎಂದರೆ ಸರಿ. ನಾನು ಆರೋಪಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ3 ನೇ ಆರೋಪಿ ಪರಃ

ಪಾಟೀ ಸವಾಲುಃ 3 ನೇ ಆರೋಪಿ ಪರ ವಕೀಲರು ಆರೋಪಿ 1 ಮತ್ತು 2 ರ ಪರ ವಕೀಲು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಮರುವಿಚಾರಣೆ ಃ ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ